ಇ) ನವೀಕರಣ ಮಾಡಿದರೆ ಮಾತ್ರ ಸಮಸ್ಯೆ ಬಗೆಹರಿಯವಹುದೆಂದು ಶಿಫಾರಸ್ಸಾಗಿರುವುದು ನಿಜವಲ್ಲವೇ?

ಈ) ನವೀಕರಿಸಲು ತಗಲುವ ಅಂದಾಜು ವೆಚ್ಚ ಎಷ್ಟು? ಸರ್ಕಾರ ನವೀಕರಿಸಲು ಉದ್ದೇಶಿಸಿ ಮಂಜೂರಾತಿ ನೀಡಲು ಏನು ಕ್ರಮ ಕೈಗೊಂಡಿದೆ? ಹಾಗಿಲ್ಲದಿದ್ದಲ್ಲಿ, ತುರ್ತು ಕ್ರಮವಹಿಸಿ ಕಳೆದ ನಾಲ್ಕು ವರ್ಷಗಳಿಂದ ರೈತರಿಗಾಗಿರುವ ಅನ್ಯಾಯ ತಪ್ಪಿಸಲು ತುರ್ತು ಕ್ರಮ ಕೈಗೊಳ್ಳಲು ಸರ್ಕಾರ ಬದ್ಧವಾಗಿದೆಯೇ?

ಉ) ಎಷ್ಟು ಕಾಲಾವಧಿಯೊಳಗೆ ಕಾಮಗಾರಿ ಪ್ರಾರಂಭಿಸಲಾಗುವುದು?

ಶ್ರೀ ಮಲ್ಲಿಕಾರ್ಜುನಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಹೌದು

ಆ) ಆಧುನೀಕರಣ ಕಾಮಗಾರಿಯಲ್ಲಿ ಮೊದಲು ಪಂಪುಗಳನ್ನು ಮಾತ್ರ ನವೀಕರಿಸುವ ಸಲುವಾಗಿ ರೂ. 19.5 ಲಕ್ಷಗಳ ಕಾಮಗಾರಿಯನ್ನು ಟೆಂಡರ್ ಮುಖಾಂತರ ಕೈಗೊಳ್ಳಲಾಗಿರುತ್ತದೆ. ಸದರಿ ಗುತ್ತಿಗೆದಾರರು ಕಾಮಗಾರಿಯನ್ನು ಪ್ರಾರಂಭಿಸದೆ ಇರುವುದರಿಂದ ಅದನ್ನು ರದ್ದು ಪಡಿಸಲು ಕ್ರಮಕೈಗೊಳ್ಳಲಾಗುತ್ತಿದೆ.

ಇ) ಹೌದು

ಈ) ಸದರಿ ಏತ ನೀರಾವರಿ ಯೋಜನೆಯನ್ನು ಸಮಗ್ರವಾಗಿ ನವೀಕರಿಸಲು ಪ್ರಸ್ತಾವನೆಯನ್ನು ತಯಾರಿಸಲಾಗುತ್ತಿದ್ದು, ಶೀಘ್ರವಾಗಿ ಕೈಗೊಳ್ಳಲು ಕ್ರಮ ತೆಗೆದುಕೊಳ್ಳಲಾಗುವುದು.

ಉ) ಪ್ರಸಕ್ತ ಸಾಲಿನಲ್ಲಿ ಪ್ರಾರಂಭಿಸಲು ಉದ್ದೇಶಿಸಿದೆ.

5354(6059) ಶ್ರೀ ಬಾಲರಾಜ್.ಎಸ್ (ಕೊಳ್ಳೇಗಾಲ) : ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೊಳ್ಳೇಗಾಲ ಪಟ್ಟಣದ ಹೃದಯ ಭಾಗದಲ್ಲಿ ಚಿಕ್ಕ ರಂಗನಾಥ ಕೆರೆಯಿಂದ ಕೊಂ ಗಳ ಕೆರೆಯವರೆಗೆ ಹರಿಯುವ ಪೀಡರ್ ಸರ್ ಕಾಟನ್ ಚಾನಲ್ ಕೊಳಚೆ ನೀರು ಜೊತೆಗೆ ಹರಿದು ನೀರು ಕಲುಷಿತವಾಗುತ್ತಿರುವುದು ಮತ್ತು ಪಟ್ಟಣದಲ್ಲಿ ಕೊಳಚೆ ನೀರು ಹರಿದು ರೋಗಾಣುಜೀವಿಗಳು ಜಾಸ್ತಿ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸದರಿ ಚಾನಲ್ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು) :

ಅ) ಹಾದು

ಆ) ಸರ್ ಕಾಟನ್ ಚಾನೆಲ್‌ನ ಅಭಿವೃದ್ಧಿಗಾಗಿ ರೂ. 300 ಲಕ್ಷ ಮೊತ್ತದ ಅಂದಾಜುಗಳನ್ನು ತಯಾರಿಸಲಾಗಿದ್ದು, ಈ ಪೈಕಿ ಸದ್ಯಕ್ಕೆ ರೂ. 99.99 ಲಕ್ಷದ ಕಾಮಗಾರಿಗೆ ಅನುಮೋದನೆ ದೊರೆತಿರುತ್ತದೆ. ಸದ್ಯದಲ್ಲಿಯೇ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ.

5355(6288) ಶ್ರೀ ಬೋಪಯ್ಯ ಕೆ.ಜಿ. (ಮಡಿಕೇರಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಲೋಕಾಯುಕ್ತರು ಕಳೆದ ಎರಡು ವರ್ಷಗಳಿಂದ ಎಷ್ಟು ಕಡೆ ಧಾಳಿ ಮಾಡಿದ್ದಾರೆ; (ಪ್ರಕರಣವಾರು ಮಾಹಿತಿ ನೀಡುವುದು)

ಆ) ಎಷ್ಟು ಪ್ರಕರಣಗಳಿಗೆ ಸಂಬಂಧಪಟ್ಟಂತೆ ಲೋಕಾಯುಕ್ತರು ಸರ್ಕಾರಕ್ಕೆ ವರದಿ ಸಲ್ಲಿಸಿರುತ್ತಾರೆ; (ವರದಿಯ ಪ್ರತಿಯನ್ನು ಪ್ರಕರಣವಾರು ನೀಡುವುದು);